4) ಕ್ರೀಡೆಯಲ್ಲಿ ಆಸಕ್ತಿಯುಳ್ಳ ಬಾಲಕ-ಬಾಲಕಿಯರಿಗೆ ವಿಶೇಷ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ.

5) ಎಳೆಯರಲ್ಲಿ ಕ್ರೀಡಾ ಪ್ರತಿಭೆಯನ್ನು ಗುರ್ತಿಸಿ ಕ್ರೀಡಾ ಶಾಲೆ : ಕ್ರೀಡಾ ವಿಭಾಗಕ್ಕೆ ಪ್ರವೇಶ ನೀಡಿ ಉತ್ತಮ ಕ್ರೀಡಾ ಪಟುಗಳನ್ನಾಗಿ ಮಾಡಲು ವಿಶೇಷ ವೈಜ್ಞಾನಿಕ ಕ್ರೀಡಾ ತರಬೇತಿಯನ್ನು ನೀಡಲಾಗುತ್ತಿದೆ.

6) ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ತಾಲ್ಲೂಕು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಎಲ್ಲಾ ಅವಕಾಶಗಳನ್ನು ಮಾಡಲಾಗುತ್ತದೆ.

7) ಕುಸ್ತಿ ಕ್ರೀಡೆಯನ್ನು ಪ್ರೋತ್ಸಾಹಿಸುವಲ್ಲಿ ಗ್ರಾಮ ಗರಡಿಮನೆ ಮತ್ತು ಕುಸ್ತಿ ಅಖಾಡಾ ಅಭಿವೃದ್ಧಿ ಪಡಿಸಲಾಗುತ್ತಿದೆ.

2) ಭಾರತದ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಪಡೆದು ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಸಂಬಂಧಿಸಿದ ಕ್ರೀಡೆಯಲ್ಲಿ ತರಬೇತಿ, ಡಿಪ್ಲೋಮೊ ಪಡೆದ ಕರ್ನಾಟಕದವರಿಗೆ ತರಬೇತಿದಾರರಿರಾಗಿ ಆಯ್ಕೆ ಮಾಡಲಾಗುತ್ತಿದೆ.

3) ರಾಜ್ಯದ ಕ್ರೀಡಾ ತರಬೇತುದಾರರುಗಳಿಗೆ ಭಾರತೀಯ ಕ್ರೀಡಾ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು ಮತ್ತು ನುರಿತ ಅಂತರಾಷ್ಟ್ರೀಯ ತರಬೇತುದಾರರ ಮೂಲಕ ವ್ಯವಸ್ಥೆಗೊಳಿಸುವ ಪುನಶ್ಚೇತನ, ಅಧಿಶಿಕ್ಷಣ ಮತ್ತು ಕಮ್ಮಟಗಳಿಗೆ ನಿಯೋಜಿಸಿ ಅವರಿಗೆ ಹೆಚ್ಚಿನ ಕ್ರೀಡಾ ಜಾನ ದೊರಕುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

4) ಸಂಬಂಧಿಸಿದ ಕ್ರೀಡೆಗಳಲ್ಲಿ ಅಗತ್ಯ ವಿರುವ ಕ್ರೀಡಾ ಸಾಮಾಗ್ರಿ ಸಲಕರಣೆ ಇತ್ಯಾದಿಗಳನ್ನು ತರಬೇತಿ ನೀಡುವ ಸಂಬಂಧ ಒದಗಿಸಲಾಗುತ್ತಿದೆ.

ಈಜು ಕ್ರೀಡಾಪಟುಗಳಿಗೆ ಪ್ರೋತ್ಸಾಹ

1320 (1733) ಶ್ರೀ ರೋಜರ್ ಬೆನ್ನಿ (ನಾಮನಿರ್ದೇಶನ) : ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಜು ಕ್ರೀಡೆಯನ್ನು ಸುಧಾರಿಸಲು ಸರ್ಕಾರವು ಕೈಗೊಂಡಿರುವ ಸಕಾರಾತ್ಮಕ ಕ್ರಮಗಳು ಯಾವುವು?

ಆ) ಕಳೆದ 3 ವರ್ಷಗಳಲ್ಲಿ ಈಜು ಕ್ರೀಡೆಗೆ ಒದಗಿಸಿರುವ ಹಣ ಮತ್ತು ವೆಚ್ಚ ಮಾಡಿದ ಹಣದ ವಿವರಗಳು(ಐಟಂವಾರು ವಿವರ ನೀಡುವುದು)

ಇ) ಗ್ರಾಮೀಣ ಪ್ರದೇಶಗಳಲ್ಲಿ ಈಜು ಕ್ರೀಡೆಯನ್ನು ಅಭಿವೃದ್ಧಿ ಪಡಿಸುವ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈಜುಕೊಳಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್ ಎಸ್ ಮಲ್ಲಿಕಾರ್ಜುನ (ಯುವ ಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಈಜು ಕ್ರೀಡೆಯನ್ನು ಪ್ರೋತ್ಸಾಹಿಸಲು ಅನೇಕ ಕ್ರಮಗಳನ್ನು ಹಮ್ಮಿಕೊಂಡಿದೆ. ಆಸಕ್ತಿಯುಳ್ಳ ಕ್ರೀಡಾ ಪಟುಗಳಿಗೆ ಈಜು ಕ್ರೀಡೆಯಲ್ಲಿ ತರಬೇತಿಯನ್ನು ನೀಡಲಾಗುವುದು. ರಾಜ್ಯ ಕ್ರೀಡಾ ಸಂಸ್ಥೆಗೆ ಧನ ಸಹಾಯ ನೀಡಿ ಕ್ರೀಡಾಪಟುಗಳಿಗೆ ರಾಷ್ಟ್ರ ಮಟ್ಟದ ಈಜು ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ ಮೈಸೂರಿನಲ್ಲಿ ರೂ 4.50 ಕೋಟಿಗಳ ವೆಚ್ಚದಲ್ಲಿ ಅಂತರ ರಾಷ್ಟ್ರ ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡಿದೆ. ಈ ಉದ್ದೇಶಕ್ಕಾಗಿ ಈಗಾಗಲೇ ರೂ. 1.65 ಕೋಟಿ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರವು, ಬೆಂಗಳೂರು ನಗರ ಪಾಲಿಕೆಯ ಕೆನ್ಸಿಂಗಟನ್ ಈಜುಕೊಳ, ಬೆಂಗಳೂರು ಹಾಗೂ ಹುಬ್ಬಳ್ಳಿ ನಗರ ಪಾಲಿಕೆಯ ಈಜುಕೊಳ ಹುಬ್ಬಳ್ಳಿ ಇವುಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿ ವ್ಯವಸ್ಥಿತ ಕ್ರೀಡಾ ತರಬೇತಿ ನೀಡಲಾಗುತ್ತಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕರ್ನಾಟಕ ರಾಜ್ಯ ಕ್ರೀಡಾ ಸಂಸ್ಥೆಗೆ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಧನ ಸಹಾಯ ನೀಡಲಾಗುತ್ತಿದೆ.

ಆ) ಈಜು ಕ್ರೀಡೆಗೆ ಕೆಳದ 3 ವರ್ಷಗಳಲ್ಲಿ ಒದಗಿಸಲಾದ ಹಣ ಮತ್ತು ವೆಚ್ಚ ಮಾಡಿದ ಹಣದ ವಿವರಗಳು ಈ ಕೆಳಕಂಡಿಂತಿವೆ.

	ಉದ್ದೇಶ	1996-97	1997-98	1998-99
1)	ಈಜುಕೊಳ ನಿರ್ಮಾಣಕ್ಕಾಗಿ	-	-	ರೂ. 1.65 ಕೋಟಿ
2)	ಕರ್ನಾಟಕ ರಾಜ್ಯ ಈಜು ಸಂಸ್ಥೆಗೆ ನೀಡಲಾದ ಅನುದಾನ	2.25ಲಕ್ಷ ರೂ.ಗಳು	5,47,401 ರೂ.ಗಳು	2,51,650 ರೂ.ಗಳು
3)	ಕು.ನಿಶಾ ಮಿಲೆಟ್ ಇವರಿಗೆ ನೀಡಲಾದ ಅನುದಾನ	-	-	87,990
4)	ಕು.ನಿಶಾ ಮೆಲೆಟ್ ಇವರಿಗೆ ನೀಡಲಾದ ಅನುದಾನ	-	1,34,000 ರೂ.ಗಳು	
5)	ಕೆನ್ಸಿಂಗ್‌ಟನ್ ಈಜುಕೊಳಕ್ಕೆ	5,74,406	6,06,225	8,27,162
6)	ಹೆಚ್‌ಡಿಎಂಸಿ ಈಜುಕೊಳ ಹುಬ್ಬಳ್ಳಿ	29,396	3,36,612	3,62,000

ಇ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈಜುಕೊಳ ನಿರ್ಮಿಸುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ.